# ಮೊಬೈಲ್ ಇಲ್ಲದೆ ಮಕ್ಕಳು ಊಟ ಮಾಡಲ್ವಾ?

**ಮೊಬೈಲ್ ಪ್ರೀತಿಯನ್ನು ಮಕ್ಕಳ ಶಕ್ತಿ–ಪ್ರತಿಭೆ ಎಂದೆಲ್ಲ ಬಣ್ಣಿಸುವುದನ್ನು ಪೋಷಕರು ನಿಯಂತ್ರಿಸಿಕೊಳ್ಳಬೇಕು. ಮೊಬೈಲ್ ಬಳಕೆ ಮಕ್ಕಳ ಭಾವಕೋಶದ ಮೇಲೆ ಉಂಟು ಮಾಡುವ ಪರಿಣಾಮದ ಬಗ್ಗೆ ಯೋಚಿಸಬೇಕು.**

■ ಸ್ವಯಂಪ್ರಭಾ



ಅಕ್ಷತಾಳ ಹೆರಿಗೆಯಾಗಿ ಮೂರುವರೆ ತಿಂಗಳಾಗಿದೆ. ಅಮ್ಮನೇ ಮುಂದೆ ನಿಂತು ಅಕ್ಷತಾಳಿಗೆ ಬಾಣಂತನ ನಡೆಸಿದ್ದಾರೆ. ಮಗುವಿನ ಸ್ನಾನ ಆದ ನಂತರ ಹಾಲು ಕುಡಿಸಿ, ಅದನ್ನು ತೆಳುವಾದ ಬೆಳ್ಳಗಿನ ಬಟ್ಟೆಯಲ್ಲಿ ಬೆಚ್ಚನೆ ಸುತ್ತಿ ಮಲಗಿಸುವಾಗ, ಸಣ್ಣಗೆ ಹಾಡೊಂದನ್ನು ಮೊಬೈಲ್‌ನಲ್ಲಿ ಹಾಕುತ್ತಾರೆ. ಮಗುವಿನ ಧ್ಯಾನ ಅತ್ತ ವಾಲಿದ್ದೇ, ಅಕ್ಷತಾಳ ಬಾಣಂತಿ ಸ್ನಾನಕ್ಕೆ ಅಣಿಮಾಡಿಕೊಳ್ಳುತ್ತಾರೆ.

ಈಗಷ್ಟೇ ನೋಟವನ್ನು ಶಬ್ದ ಬಂದೆಡೆ ತಿರುಗಿಸುತ್ತಿರುವ ಮಗುವಿನ ಮುಂದೆ ಎಷ್ಟೋ ಸಾರಿ, ಮೊಬೈಲ್‌ನಲ್ಲಿಯೇ ಹಾಡುಗಳನ್ನು ಕೇಳಿಸುತ್ತ, 'ಈ ಮಗುವಿಗೆ ಸಂಗೀತವೆಂದರೆ ಇಷ್ಟವೆನಿಸುತ್ತದೆ' ಎಂದು ಮನೆಯವರು ಮಾತನಾಡಿಕೊಳ್ಳುವುದುಂಟು. ವಿಷ್ಣು ಸಹಸ್ರನಾಮವನ್ನೂ ಮೊಬೈಲ್‌ನಲ್ಲಿ ಹಾಕಿ, 'ಮಗುವಿನ ಕಿವಿಗೆ ದೇವರ ನಾಮ ಬೀಳುತ್ತಿರಲಿ' ಎಂದು ಆಶಿಸುತ್ತಾರೆ. ಮೊನ್ನೆ ಅಜ್ಜಿ ಪಕ್ಕದ ಮನೆಯವರೊಡನೆ ಹೇಳಿದರು, 'ಈಗಿನ ಕಾಲದ ಮಕ್ಕಳು ಭಾರೀ ಹುಶಾರು. ನನ್ನ ಮೊಮ್ಮಗುವಿಗೆ ಈಗಲೇ ಮೊಬೈಲ್ ಅಂದರೆ ಇಷ್ಟ'.

ಮೊಬೈಲ್ ಎಂದರೆ ಮಕ್ಕಳಿಗಿಷ್ಟ ಎನ್ನುವ ಮಾತನ್ನು ಈಗ ನಾವು ಲೋಕಾದ್ಯಂತ ಕೇಳುತ್ತಿದ್ದೇವೆ. ಮೊಬೈಲ್ ಅನ್ನು ನಿರ್ವಹಿಸಲು ಕಲಿತ ಮಕ್ಕಳ ಚುರುಕುತನವನ್ನು ನೋಡಿ ಪೋಷಕರು ಬಹಳ ಹೆಮ್ಮೆಪಡುತ್ತಾರೆ. ಇನ್ನೆಷ್ಟೋ ಮನೆಗಳಲ್ಲಿ ಅಜ್ಜಿಗೆ, ಅಪ್ಪಂಗೆ, ಅಮ್ಮಂಗೆ, ಮಾವನಿಗೆ ಮೊಬೈಲ್‌ನ ಸರಿಯಾದ ಮಾಹಿತಿ ಕೊಡುವ ಮಾಹಿತಿತಜ್ಞರಂತೂ ಮಕ್ಕಳೇ ಆಗಿರುತ್ತಾರೆ.

ಜಯಶ್ರೀಯಂತೂ ಮಗುವಿಗೆ ಉಣ್ಣಿಸಲು ಮೊಬೈಲ್‌ನಲ್ಲಿ ಕೆಲವು ವಿಡಿಯೊಗಳನ್ನು ಡೌನ್‌ಲೋಡ್ ಮಾಡಿ ಇಟ್ಟುಕೊಂಡಿದ್ದಾಳೆ. ಊಟವೇ ಬೇಡವೆಂದು ರಚ್ಚೆ ಹಿಡಿಯುವ ಮಗುವಿಗೆ, ಸರಸರನೆ ಉಣ್ಣಿಸಲು ಈ ಮೊಬೈಲ್ ಸಹಾಯ ಮಾಡುತ್ತದೆ. ಆದರೆ ನಿಜವಾಗಿಯೂ ಮಕ್ಕಳಿಗೆ ಊಟ ಮಾಡಲು ಮೊಬೈಲ್ ಬೇಕೆ?

ಮಕ್ಕಳಿಗೆ ಮೊಬೈಲ್ ಇಷ್ಟ ಎನ್ನುವುದು ಪೋಷಕರ ಪಲಾಯನವಾದವಷ್ಟೇ. ಆದರೆ ಮಕ್ಕಳಿಗೆ ಹಾಡು ಇಷ್ಟವಾಗುತ್ತದೆ ಎನ್ನುವುದೂ ನಿಜ. ಕುತೂಹಲವನ್ನು ಹೆಚ್ಚು ಕಾಪಿಟ್ಟುಕೊಳ್ಳುವ ಯಾವುದೇ ವಿಷಯವನ್ನು ಅನಾವರಣ ಮಾಡುವುದು ಅವರಿಗೆ ಇಷ್ಟ. ದಿನವೂ ಹೊಸದೊಂದು ವಿಚಾರವೆಂದರೆ ಮತ್ತಷ್ಟು ಆಸಕ್ತಿ. ಹಕ್ಕಿ, ಬೆಕ್ಕು, ಅಳಿಲಿನ ಚಿಂವ್ ಚಿಂವ್, ಕುತೂಹಲ ಮೂಡಿಸುವ ಕತೆಗಳು, ಹೊಸ ಜಾಗ, ಹೊಸ ನೋಟ ಎಲ್ಲವೂ ಮಕ್ಕಳಿಗೆ ಇಷ್ಟ. ಅದನ್ನೆಲ್ಲ ಒದಗಿಸುವ ಏಕೈಕ ಸುಲಭ ಸಾಮಗ್ರಿ ಮೊಬೈಲ್ ಎಂದು ಪೋಷಕರು ಭಾವಿಸಿರುತ್ತಾರೆ.

ಮಕ್ಕಳು ಮೊಬೈಲ್ ಬಳಸುವುದು ಎಷ್ಟು ಒಳ್ಳೆಯದು, ಎಷ್ಟು ಕೆಟ್ಟದು ಎಂಬ ಚರ್ಚೆ ಪ್ರತ್ಯೇಕವಾದುದು. ಆದರೆ ನಿಜವಾಗಿಯೂ ಮೊಬೈಲ್‌ಗೆ ಶರಣಾಗುವುದು ಮಕ್ಕಳಲ್ಲ, ಬದಲಾಗಿ ಪೋಷಕರು. ಅದಕ್ಕೆ ಕಾರಣಗಳೂ ಇಲ್ಲದಿಲ್ಲ. ಮೊದಲನೆಯದಾಗಿ, ನಗರ ಜೀವನದಲ್ಲಿ ಮಕ್ಕಳ ಕುತೂಹಲದ ಮನಸ್ಸನ್ನು ತಣಿಸುವ ಅವಕಾಶಗಳು ಬಹಳ ಕಡಿಮೆ.

ದಕ್ಷಿಣ ಕನ್ನಡ ಜಿಲ್ಲೆಯ ಕಡಬ ನಿವಾಸಿ ನಾರಾಯಣ ದೇವಿಪ್ರಸಾದ್ ಶಿಕ್ಷಕರೂ ಹೌದು; ಮಕ್ಕಳ ಮನೋಭಾವವನ್ನು ಅರಿತು ಕಾರ್ಯನಿರ್ವಹಿಸುವವರು. ಮಕ್ಕಳಿಗೆ ಮೊಬೈಲ್ ಇಷ್ಟ ಎನ್ನುವ ಮಾತಿನ ಬಗ್ಗೆ ಅವರು ಬೇರೆಯದೇ ಆದ ಅಭಿಪ್ರಾಯವನ್ನು ಹೇಳುತ್ತಾರೆ. 'ಊಟ ಮಾಡದೇ ಇರುವ ಮಗುವನ್ನು ರಮಿಸಲು ಅಮ್ಮನಾದವಳು ಏನೆಲ್ಲಾ ಹರಸಾಹಸ ಮಾಡುತ್ತಿದ್ದಳು. ಹಾಡಿ, ಕುಣಿದು, ಅಭಿನಯಿಸಿ, ಕತೆಗಳನ್ನು ಹೆಣೆದು, ಹಾಡನ್ನೂ ತಾನೇ ಹೆಣೆದು ಉಣ್ಣಿಸಲು ಪ್ರಯತ್ನಿಸುತ್ತಿದ್ದಳು. ಇದು ಸುಲಭದ ಕೆಲಸವೇನೂ ಅಲ್ಲ. ಆದರೆ ಅದು ಮಗುವಿನ ಮನಸ್ಸಿನ ಮೇಲೆ ಬಹಳಷ್ಟು ಸಕಾರಾತ್ಮಕ ಪರಿಣಾಮ ಬೀರುತ್ತದೆ'.

ಅಮ್ಮನ ಹಾಡಿನಲ್ಲಿ ಮಗುವೇ ಹೀರೋ. ಮಗಳೇ ದೇವತೆ. ಮಗು ಮನಸ್ಸನ್ನು ಒಲಿಸಲು ಅಮ್ಮ ಮಾಡುವ ಅಭಿನಯಕ್ಕೆ ಮಗುವೇ ಪ್ರಧಾನ ಪ್ರೇಕ್ಷಕನಲ್ಲವೇ. ಆಕೆ ಯಾವ ಕತೆ ಹೇಳಿದರೂ, ಅದರಲ್ಲಿ ಮಗುವಿಗೇ ಪ್ರಧಾನ ಜಾಗ. ಅಮ್ಮನ ಸೃಜನಶೀಲತೆಯೆಲ್ಲ ರೂಪಪಡೆದು ಅರಳುತ್ತಿತ್ತು.

'ಅಳಿಲು ಮರಿ ಮರದ ಮೇಲಿನ ಹೂವ ಕಂಡು ಹೇಗೆ ಅಚ್ಚರಿಪಟ್ಟಿತು? ನನ್ನ ಕಂದಾ... ಹೇಳು ನೋಡುವಾ... 'ಆಹಾ..' ಎಂದು ಅಚ್ಚರಿ ಪಟ್ಟಿತಲ್ಲಾ' ಎನ್ನುತ್ತಾ ಕಂದನ ಗಮನವನ್ನು ಬೇರೆಡೆ ಸೆಳೆದು ತುತ್ತನ್ನು ಕಂದನ ಬಾಯಿಗಿಡುತ್ತಿದ್ದಳು.

ಇಂದು ಕಾಲ ಬದಲಾಗಿದೆ. ನಗರದ ಬದುಕಿನಲ್ಲಿ ಅಳಿಲನ್ನು ಹುಡುಕುವುದಾದರೂ ಎಲ್ಲಿ? ಓಟದ ಬದುಕಿನಲ್ಲಿ ಸೃಜನಶೀಲತೆಗೆ ರೂಪು ನೀಡಲು ಅವಕಾಶವಾದರೂ ಎಲ್ಲಿ? ಆದ್ದರಿಂದ ಅನಿವಾರ್ಯತೆಯ ಬೋರ್ಡು ಹಚ್ಚಿ, ಮಗುವಿನ ಕೈಗೆ ಮೊಬೈಲು ಕೊಟ್ಟು ಅಮ್ಮ ಬಟ್ಟೆ ಒಣಹಾಕಲು ಟೆರೇಸಿಗೆ ಹೋಗಬೇಕಾಗುತ್ತದೆ.

ಪೋಷಕರ ಅನಿವಾರ್ತೆಯನ್ನು ಒಪ್ಪಿಕೊಳ್ಳಬಹುದಾದರೂ, ಮೊಬೈಲ್ ಬಗ್ಗೆ ಕುತೂಹಲ ಇಟ್ಟುಕೊಂಡಿರುವ ಮಗುವಿಗೆ 'ಹುಶಾರು', 'ಜಾಣ' ಎಂದು ಹೊಗಳಿಕೆಯನ್ನು ನೀಡದೇ ಇರುವ ಸಂಯಮ ಕಾಯ್ದುಕೊಳ್ಳೋಣ. ಮೊಬೈಲ್ ಎಂಬುದು ಜೀವನದ ವಿವಿಧ ಕೆಲಸಗಳ ನಿರ್ವಹಣೆಗೆ ಇರುವ ಸಾಧನವಷ್ಟೇ. ಜೀವನದ ಕಲಿಕೆಯ ಭಾಗ ಬೇರೆಯದ್ದೇ ಆಗಿದೆ ಎಂಬ ಧೋರಣೆಯೊಂದು ಪೋಷಕರ ಮನಸ್ಸಿನಲ್ಲಿ ಉಳಿಯಲಿ.

ಪ್ರತಿಕ್ರಿಯಿಸಿ: feedback@sudha.co.in